ಸೆಲೆಬ್ರಿಟಿ

ಹನಿ

# ದೋನಿ ಮತ್ತು ವಿಶ್ವಕಪ್

'ಮಹೇಂದ್ರಸಿಂಗ್ ದೋನಿ ಹೀಗೆಯೇ ಆಡುತ್ತಿದ್ದರೆ 2019ರ ಜೂನ್ ವೇಳೆಗೆ ಇಂಗ್ಲೆಂಡಿನಲ್ಲಿ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲೂ ಭಾರತ ತಂಡದಲ್ಲಿ ಸ್ಥಾನ ಪಡೆಯುವುದು ಖಚಿತ–' ಎಂದಿದ್ದಾರೆ ಭಾರತ ತಂಡದ ಕೋಚ್ ರವಿಶಾಸ್ತ್ರಿ. ಇನ್ನೂ 21 ತಿಂಗಳ ಬಳಿಕ ನಡೆಯಲಿರುವ ವಿಶ್ವಕಪ್ ಟೂರ್ನಿಗೆ ದೋನಿ ಅವರ ಹೆಸರನ್ನು ಅಡ್ವಾನ್ಸ್ ಬುಕಿಂಗ್ ಮಾಡಲು ರವಿಶಾಸ್ತ್ರಿ ಯತ್ನಿಸುತ್ತಿದ್ದಾರೆಯೆ.. ಎನ್ನುವ ಅನುಮಾನ ಕೆಲವರದ್ದು. ಹಾಗೆ ನೋಡಿದರೆ ದೋನಿ ಪರವಾಗಿ ಲಾಬಿ ಮಾಡುತ್ತಿರುವವರ ದೊಡ್ಡ ಪಟ್ಟಿಯೇ ಇದೆ. ಹಿರಿಯ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಕೂಡಾ, – 'ದೋನಿಯನ್ನು ತಂಡದಿಂದ ಸ್ಥಳಾಂತರ ಮಾಡುವ ಇನ್ನೊಬ್ಬ ಆಟಗಾರರು ಯಾರೂ ಕಾಣುತ್ತಿಲ್ಲ–' ಎಂದಿದ್ದರು.

ದೋನಿಗೆ ಈಗ 36 ವರ್ಷ. ವಿಶ್ವಕಪ್ ನಡೆಯುವ ಹೊತ್ತಿಗೆ ವಯಸ್ಸು 38 ಆಗಲಿದೆ. 40ಕ್ಕೆ ಎರಡೇ ವರ್ಷ ದೂರ. 50 ಓವರ್‌ಗಳ ವಿಶ್ವಕಪ್ ಕ್ರಿಕೆಟ್ ಪಂದ್ಯದಲ್ಲಿ ಆಟವಾಡುವ ಕ್ರಿಕೆಟಿಗ ದೈಹಿಕ ಕ್ಷಮತೆಯಲ್ಲೂ, ಆಟದ ಫಾರ್ಮ್‌ನಲ್ಲೂ ಅತ್ಯಧಿಕ ಫಿಟ್ ಆಗಿರಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಸದ್ಯಕ್ಕೆ ಏಕದಿನ ಕ್ರಿಕೆಟ್ ಪಂದ್ಯಗಳಲ್ಲಿ ಮಾತ್ರ ಭಾರತದ ಪರ ಆಡುತ್ತಿರುವ ದೋನಿ, ದೈಹಿಕ ಕ್ಷಮತೆ ಮತ್ತು ಆಟದ ಫಾರ್ಮ್‌ನಲ್ಲಿ ಸೂಪರ್ ಆಗಿದ್ದಾರೆ ಎನ್ನುವುದೂ ನಿಜ. ಶ್ರೀಲಂಕಾದಲ್ಲಿ ಇತ್ತೀಚೆಗೆ ಮುಗಿದ ಸರಣಿಯಲ್ಲಿ ಎಲ್ಲ ಪಂದ್ಯಗಳನ್ನೂ ಗೆದ್ದು 'ವೈಟ್‌ವಾಶ್' ವಿಜಯ ಗಳಿಸಿದ ಭಾರತ ತಂಡದಲ್ಲಿ ದೋನಿಯ ಆಟ ಅತ್ಯಂತ ಮಹತ್ವದ್ದಾಗಿತ್ತು. ಎರಡು ಏಕದಿನ ಪಂದ್ಯಗಳಲ್ಲಂತೂ ತಂಡವನ್ನು ಗೆಲುವಿನ ದಡ ಹತ್ತಿಸಿದ್ದೇ ದೋನಿ. ಲಂಕಾ ಸರಣಿಯಲ್ಲಿ ಒಟ್ಟು 162 ರನ್‌ಗಳನ್ನು ಹೊಡೆದು ಸರಾಸರಿ 82.23 ರನ್‌ಗಳನ್ನು ದಾಖಲಿಸಿದ್ದಾರೆ ದೋನಿ. ಸರಣಿಯಲ್ಲಿ ಒಟ್ಟು ಬಂದ ಆರು ಶತಕದ ಜತೆಯಾಟಗಳಲ್ಲಿ ಮೂರರಲ್ಲಿ ದೋನಿ ಇದ್ದರು ಎನ್ನುವುದು ತಂಡಕ್ಕೆ ಈತ ಎಷ್ಟು ಅನಿವಾರ್ಯ ಎನ್ನುವುದನ್ನೇ ಸೂಚಿಸುತ್ತದೆ. ಸದ್ಯಕ್ಕಂತೂ ದೋನಿ ಇಲ್ಲದ ವಿಶ್ವಕಪ್ ತಂಡವನ್ನು ಊಹಿಸಲೂ ಕ್ರಿಕೆಟ್ ಮ್ಯಾನೇಜ್‌ಮೆಂಟ್ ಸಿದ್ಧವಿಲ್ಲ!– ಇದೂ ರವಿ ಶಾಸ್ತ್ರಿ ಅವರದ್ದೇ ಡೈಲಾಗ್.

ಲಂಕಾದಲ್ಲಿ ದೋನಿ ಆಡಿದ್ದು 300ನೇ ಏಕದಿನ ಪಂದ್ಯ. ಅತ್ಯುನ್ನತ ಮಟ್ಟದ ದೈಹಿಕ ಕ್ಷಮತೆ ಇಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಇಷ್ಟೊಂದು ಏಕದಿನ ಪಂದ್ಯಗಳನ್ನು ಆಡುವುದು ಸಾಧ್ಯವೇ ಇಲ್ಲ. ಜತೆಗೆ ಏಕದಿನ ಪಂದ್ಯಗಳಲ್ಲಿ ನೂರು ಸ್ಟಂಪಿಂಗ್‌ಗಳನ್ನು ಮಾಡಿ ವಿಶ್ವದಾಖಲೆಯನ್ನೂ ದೋನಿ ಅಲ್ಲಿ ಸ್ಥಾಪಿಸಿದ್ದಾರೆ. ವಿಕೆಟ್ ಹಿಂದೆ ದೋನಿ ಇವತ್ತಿಗೂ ಅತ್ಯಂತ ಭದ್ರ ರಕ್ಷಕ.

ಹಾಗೆಂದು ಒಬ್ಬ ಆಟಗಾರನನ್ನು ಎಷ್ಟು ವರ್ಷಗಳ ಕಾಲ ತಂಡದಲ್ಲಿ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ? ತರುಣ ಆಟಗಾರರಿಗೆ ಅವಕಾಶ ಕೊಟ್ಟರೆ ತಾನೇ ಅವರು ಮುಂದೆ ತಂಡಕ್ಕೆ ಭದ್ರ ಆಸರೆಯಾಗುವುದು..? ಎನ್ನುವ ಪ್ರಶ್ನೆಯನ್ನೂ ಹಲವರು ಕೇಳುತ್ತಿದ್ದಾರೆ. ಇದಕ್ಕೆ ಇವರೆಲ್ಲ ನೀಡುವ ಅತ್ಯುತ್ತಮ ಉದಾಹರಣೆ ದಿನೇಶ್ ಕಾರ್ತಿಕ್‌ನದ್ದು. ಮಧ್ಯಮ ಕ್ರಮಾಂಕದಲ್ಲಿ ಅತ್ಯುತ್ತಮ ಆಟಗಳನ್ನು ಪ್ರದರ್ಶಿಸಿರುವ ದಿನೇಶ್ ಕಾರ್ತಿಕ್, ವಿಕೆಟ್ ಕೀಪಿಂಗ್‌ನಲ್ಲೂ ಉತ್ತಮ ಸಾಧನೆ ತೋರಿದವರು. ಆದರೆ ಇತ್ತೀಚಿನ ವರ್ಷಗಳಲ್ಲಿ ದೋನಿಗೆ 'ಬ್ಯಾಕಪ್' ವಿಕೆಟ್ ಕೀಪರ್ ಆಗಿಯೇ ಇವರ ವೃತ್ತಿಜೀವನ ಕಳೆದುಹೋಗಿದೆ.

ದೋನಿಯನ್ನು ಸ್ಥಳಾಂತರ ಮಾಡಬಲ್ಲ ಹಲವು ವಿಕೆಟ್‌ಕೀಪರ್/ ಬ್ಯಾಟ್ಸ್‌ಮನ್‌ಗಳಿದ್ದಾರೆ. ಸೌರವ್ ಗಂಗೂಲಿ ಅವರ ಪ್ರಕಾರ, ಪಶ್ಚಿಮ ಬಂಗಾಳದ ವೃದ್ಧಿಮಾನ್ ಸಹಾ ಭಾರತದ ಭವಿಷ್ಯದ ವಿಕೆಟ್ ಕೀಪರ್. ಆದರೆ ಸಹಾ ಈಗಾಗಲೆ 33 ವರ್ಷ ದಾಟಿದ್ದಾರೆ. ಕೆ.ಎಲ್.ರಾಹುಲ್, ಕೇದಾರ್ ಜಾಧವ್, ಪಾರ್ಥಿವ್ ಪಟೇಲ್– ಈ ಮೂವರೂ ದೋನಿಯ ಸ್ಥಾನಕ್ಕೆ ಪ್ರಬಲ ಪ್ರತಿಸ್ಪರ್ಧಿಗಳು. ಆದರೆ ದೋನಿ ಬೆಂಬಲಿಗರು ಇವರ ಮೊಸರಲ್ಲಿ ಕಲ್ಲು ಹುಡುಕುವುದು ನಡೆದೇ ಇದೆ. 'ಕೆ.ಎಲ್.ರಾಹುಲ್ ಮಧ್ಯಮ ಕ್ರಮಾಂಕದಲ್ಲಿ ಆಡಲು ಆಗುವುದಿಲ್ಲ; ಟ್ವೆಂಟಿ20 ಪಂದ್ಯಗಳಲ್ಲಿ ಆಡಿ ಹೆಚ್ಚು ಅನುಭವವಿಲ್ಲ/ ಕೇದಾರ್ ಜಾಧವ್ ಫಾರ್ಮ್ ಎಲ್ಲ ಕಾಲದಲ್ಲೂ ಸ್ಥಿರವಾಗಿಲ್ಲ/ ಪಾರ್ಥಿವ್ ಪಟೇಲ್‌ನಿಗೆ ಅನುಭವ ಸಾಲುವುದಿಲ್ಲ..' ಹೀಗೆ ಇವರ ವಿರುದ್ಧದ ವಾದಗಳು ಕೇಳಿಬರುತ್ತಿವೆ. ದೋನಿ ಯುವಕನಾಗಿದ್ದಾಗ ಆಡುತ್ತಿದ್ದಂತೆಯೇ ಶಕ್ತಿಶಾಲಿ ಹೊಡೆತಗಳನ್ನು ಬೀಸುತ್ತಿರುವ ರಿಶಬ್ ಪಂತ್ ಇನ್ನೊಂದು ಆಯ್ಕೆ. ಆದರೆ, ಸೆಹ್ವಾಗ್ ಪ್ರಕಾರ, ರಿಶಬ್‌ಗೆ ಅನುಭವದ ಕೊರತೆಯಿದೆ!

ಹಾಗೆಂದು ದೋನಿ 2019ರವರೆಗೆ ಮುಂದುವರಿಯುವುದು ಅಷ್ಟು ಸುಲಭವಿಲ್ಲ. ಫಾರ್ಮ್ ಚೆನ್ನಾಗಿದ್ದರೂ ಇತ್ತೀಚೆಗಷ್ಟೆ ಯುವರಾಜ್ ಸಿಂಗ್‌ನನ್ನು ವಯಸ್ಸಿನ ಕಾರಣದಿಂದ ತಂಡದಿಂದ ಕೈಬಿಟ್ಟಾಗಿದೆ. ಗೌತಮ್ ಗಂಭೀರ್ ಇನ್ನೂ ಆಡುವ ಸಾಮರ್ಥ್ಯ ಉಳಿಸಿಕೊಂಡಿದ್ದಾಗಲೇ ಅವರನ್ನು ಕೈಬಿಟ್ಟು ಕೆ.ಎಲ್.ರಾಹುಲ್, ಅಭಿನವ್ ಮುಕುಂದ್ ಮುಂತಾದವರಿಗೆ ಅವಕಾಶ ಕೊಟ್ಟಿಲ್ಲವೆ...? ಎನ್ನುವ ಪ್ರಶ್ನೆಗಳನ್ನು ಕೇಳುವವರಿದ್ದಾರೆ.

ಭಾರತ ತಂಡದ ಆಯ್ಕೆ ಸಮಿತಿ ಮುಖ್ಯಸ್ಥ ಎಂಎಸ್‌ಕೆ ಪ್ರಸಾದ್ ಪ್ರಕಾರ– 'ದೋನಿ ಭಾರತ ತಂಡಕ್ಕೆ ಅಟೊಮ್ಯಾಟಿಕ್ ಆಯ್ಕೆ ಅಲ್ಲ.' ಅಂದರೆ ಅವರ ಆಯ್ಕೆಯನ್ನು ಕಷ್ಟ ಪಟ್ಟು ಆಡಿ ಅವರೇ ಗಳಿಸಿಕೊಂಡಿದ್ದಾರೆ ಎಂದರ್ಥ. ಇತ್ತೀಚಿನ ದಿನಗಳಲ್ಲಿ ದೋನಿಯ ಆಟದ ಶೈಲಿ ಬದಲಾಗಿದೆ. ಹಿಂದಿನಂತೆ ಆರಂಭದಲ್ಲೇ ಆಕ್ರಮಣಕಾರಿ ಬೌಂಡರಿಗಳು ಬರುತ್ತಿಲ್ಲ. ವಿಕೆಟ್ ನಡುವಿನ ಓಟದಲ್ಲಿ ಚುರುಕು ಕಡಿಮೆಯಾಗಿದೆ. ವಯಸ್ಸಾದಂತೆ ಸಣ್ಣ ತಪ್ಪುಗಳೂ ದೊಡ್ಡದಾಗಿ ಕಾಣುತ್ತವೆ. ದೋನಿ ಈ ಎಲ್ಲ ಸವಾಲುಗಳನ್ನು ಎದುರಿಸಿ ವಿಶ್ವಕಪ್‌ವರೆಗೆ ಬಾಳಿಕೆ ಬರುವರೆ...? ಕಾದು ನೋಡಬೇಕು.




Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65